www.ecourtsindia.com

**ಪ್ರಭಾರ 5ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ., ನ್ಯಾಯಾಲಯ, ಮೈಸೂರು.**

**ಸಿ. ಸಿ. ಸಂಖ್ಯೆ : 995/2011**

ಫಿರ್ಯಾದಿ :- ಶ್ರೀನಿವಾಸುಲು ಬಿನ್ ಗುರುವಯ್ಯ ,
ಮನೆ ನಂ.:193 , 2ನೇ ಕ್ರಾಸ್ ,
ರೂಪ ನಗರ , ಮರಟಿಕತನಹಳ್ಳಿ ಅಂಚೆ,
ಬೋಗಾದಿ , ಮೈಸೂರು

ವಿರುದ್ಧ

ಆರೋಪಿ :- ರವೀಂದ್ರ ಎಂ ಪಿ , ಬಿನ್ ಲೇಟ್ ಪುರುಷೋತ್ತಮ ,
ಸಿವಿಲ್ ಕಂಟ್ರಾಕ್ಟರ್ , ರವೀಂದ್ರ ಅಸೋಸಿಯೇಟ್ಸ್ ,
ನಂ.:130 , ಮಾಡಿವಾಲ ಬೀದಿ ,
ಎನ್ ಎಸ್ ರಸ್ತೆ , ಚಾಮರಾಜ ಮೊಹಲ್ಲ ,
ಮೈಸೂರು

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿ ಆರೋಪಿಯ ಹೇಳಿಕೆ**

1. ಸಾಕ್ಷಿದಾರರ ಹೇಳಿಕೆಯನ್ನು ನೀವು ಕೇಳಿದ್ದೀರಾ ?

ಉ :- ಕೇಳಿದ್ದೇನೆ

2. ಪ್ರಾಸಾ.1- ಎಂ.ಶ್ರೀನಿವಾಸಲುರವರು ತಮ್ಮ ಹೇಳಿಕೆಯಲ್ಲಿ ಆರೋಪಿಯಾದ ನೀವು 1,00,000/- ರೂ.ಗಳನ್ನು ಪಿರ್ಯಾದುದಾರರಿಂದ ಪಡೆದಿದ್ದು , ಅದರ ಮರುಪಾವತಿಗಾಗಿ ನೀವು ಓರಿಯೆಂಟಲ್ ಬ್ಯಾಂಕ್ ಆಫ್ ಕಾಮರ್ಸ್ , ದೇವರಾಜ ಅರಸ್ ರಸ್ತೆ , ಮೈಸೂರು ಚೆಕ್ಕು ಸಂಖ್ಯೆ: 20778 ದಿ: 1-2-2011 ರಲ್ಲಿ ರೂ.1,00,000/- ಎಂದು ನಮೂದಿಸಿ ಒಂದು ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುವುದಾಗಿ ಹೇಳುತ್ತಾರೆ. ನೀವೇನು ಹೇಳುತ್ತೀರಾ?

ಉ :- ನಿಜ

3. ಪ್ರಾಸಾ.1ರವರು ಮುಂದುವರೆದು ಸದರಿ ಚೆಕ್ಕನ್ನು ಫಿರ್ಯಾದುದಾರರು ತನ್ನ ಬಾಬ್ತು ಹೆಚ್.ಡಿ.ಎಫ್.ಸಿ. ಬ್ಯಾಂಕ್ , ಸರಸ್ವತಿಪುರಂ ಶಾಖೆ , ಮೈಸೂರಿನಲ್ಲಿ ನಗಧೀಕರಣಕ್ಕೆ ಹಾಜರ್ಪಡಿಸಿದಾಗ, ಆರೋಪಿಯಾದ ನಿಮ್ಮ "ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಷರದೊಂದಿಗೆ 2-02-2011 ರಂದು ಮೆಮೋವನ್ನು ಬ್ಯಾಂಕ್‌ನವರು ನೀಡಿರುವುದಾಗಿ ಹೇಳುತ್ತಾರೆ. ನೀವೇನು ಹೇಳುತ್ತೀರಾ?

ಉ :- ನಿಜ

This is a True Copy of the Court Records Online. Authenticated @ districts.ecourtsindia.com/cnr/KAMS030049142011/truecopy/order-1.pdf

www.ecourtsindia.com



4. ಪ್ರಾ.ಸಾ.1ರವರು ಮುಂದುವರೆದು ತಮ್ಮ ಹೇಳಿಕೆಯಲ್ಲಿ ಈ ನಿಟ್ಟಿನಲ್ಲಿ ಹಣ ಮರುಪಾವತಿಗಾಗಿ ವಕೀಲರ ಮುಖಾಂತರ ನಿಮಗೆ ಕಾನೂನು ರೀತ್ಯಾ ನೋಟೀಸನ್ನು 15-02-2011 ರಂದು ಆರ್.ಪಿ.ಎ.ಡಿ. ಮತ್ತು ಸಿಬಿಪಿ ಮೂಲಕ ಜಾರಿ ಮಾಡಿದ್ದರೂ ಸಹ ನೀವು ಹಣವನ್ನು ಮರುಪಾವತಿಸಿರುವುದಿಲ್ಲ ಹಾಗೂ ಪ್ರತ್ಯುತ್ತರವನ್ನು ನೀಡಿರಿರುವುದಿಲ್ಲ ಎಂದು ಹೇಳುತ್ತಾರೆ. ನೀವೇನು ಹೇಳುತ್ತೀರಾ?

ಉ ಃ- ನಿಜ

5. ಪ್ರಾ.ಸಾ.1ರವರು ಮುಂದುವರೆದು ತಮ್ಮ ಹೇಳಿಕೆಯಲ್ಲಿ ನಿಪಿ-1 ಚೆಕ್ , ನಿಪಿ-2 ಮತ್ತು ನಿಪಿ-3 ಬ್ಯಾಂಕ್‌ನವರು ನೀಡಿದ ಹಿಂಬರಹ , ನಿಪಿ-4 ನೋಟೀಸ್ , ನಿಪಿ-5 ಜಾರಿಯಾಗದ ನೋಟೀಸ್ , ನಿಪಿ5(ಎ) ಅಂಚೆ ಕವರ್ , ಯು.ಸಿ.ಪಿ.ರಶೀದಿ-ನಿಪಿ-6ಗಳನ್ನು ಹಾಜರ್ಪಡಿಸಲಾಗಿದೆ ಎಂದು ಹೇಳುತ್ತಾರೆ , ನೀವೇನು ಹೇಳುತ್ತೀರಾ?

ಉ ಃ- ನಿಜ

6. ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯಾ ?

ಉಃ- ಇಲ್ಲ ಇದೆ

7. ಈ ಪ್ರಕರಣ ಕುರಿತು ನೀವು ಏನಾದರೂ ಹೇಳುವುದು ಇದೆಯಾ ?

ಉ ಃ- ಇಲ್ಲ

ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ತಿಳಿಸಿ ಕೇಳಿದಾಗ ಅವನು ಅವುಗಳನ್ನು ತಿಳಿದುಕೊಂಡು ಉತ್ತರಿಸಿದ್ದು ಅಂತಹಾ ಉತ್ತರಗಳನ್ನು ಪ್ರತಿ ಪ್ರಶ್ನೆಗಳಡಿ ಅವರಿಂದ ಕನ್ನಡದಲ್ಲಿಯೇ ನಮೂದಿಸಿಕೊಂಡದ್ದಾಗಿ ಈ ಮೂಲಕ ದೃಢೀಕರಿಸಿದೆ.

ದಿನಾಂಕಃ 28/6/2013

ಪ್ರಭಾರ 5ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು
ಪ್ರ.ದ.ನ್ಯಾದಂ, ಮೈಸೂರು.

M.P

This is a True Copy of the Court Records Online. Authenticated @ districts.ecourtsindia.com/cnr/KAMS030049142011/truecopy/order-1.pdf